ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಈ ಸರ್ಕಾರ ಬಂದ ನಂತರ 1995ರಲ್ಲಿ ಒಂದು ಬಾರಿ 29ವರ್ಷ ಮೇಲ್ಪಟ್ಟವರಿಗೆ ಮೀಸಲಾತಿ ನೀಡಲಾಗಿತ್ತು. ಇವರನ್ನು ನೇಮಕಾತಿ ಮಾಡಿಕೊಳ್ಳಲು ವಿಶೇಷವಾದ ನೇಮಕಾತಿ ನಿಯಾಮಗಳನ್ನು ರೂಪಿಸಬೇಕಾಗುತ್ತದೆ. ಪದೇಪದೇ ಸಾಮಾನ್ಯ ನೇಮಕಾತಿ ನಿಯಮಗಳನ್ನು ಬದಿಗಿಟ್ಟು, ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವುದನ್ನು ನ್ಯಾಯಾಲಯವು ಕೂಡ ಒಪ್ಪುವುದಿಲ್ಲ. ಆದರೂ ಸಹ, ಶಿಕ್ಷಕರ ಮೇಲೆ ಕರುಣೆಯಿಂದ ಅವರುಗಳಿಗೆ ಮತ್ತೊಂದು ಅವಕಾಶ ನೀಡಲು ಸರ್ಕಾರ ಯೋಚಿಸಿದೆ. ಈಗ ಹೊರಡಿಸಿರುವ ಸಾಮಾನ್ಯ ನೇಮಕಾತಿ ಪ್ರಕ್ರಿಯೆ ಮುಗಿದ ನಂತರ, ವಿಶೇಷ ನೇಮಕಾತಿ ಮೂಲಕ 29 ವರ್ಷಗಳಿಗೆ ಮೇಲ್ಪಟ್ಟ ಟಿಸಿಹೆಚ್ ಪೂರೈಸಿದ ಅಭ್ಯರ್ಥಿಗಳನ್ನು ನೇಮಕ ಮಾಡಲು ಸರ್ಕಾರ ಯೋಚಿಸುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಪಿಎಂಸಿ ಸಭೆ ಕರೆದಿದ್ದರಿಂದಾಗಿ ನಾನು ಅಲ್ಲಿಗೆ ಹೋಗಿದ್ದು, ಇಲ್ಲಿ ಇರಲಿಲ್ಲ. ಅದಕ್ಕೆ ಈಗ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ಕೋರುತ್ತೇನೆ.

(ಕ) ಬೇಸಿಗೆ ತಿಂಗಳಲ್ಲಿ ನೀರೆತ್ತುವ ಪರವಾನಗಿ ಹೊರಡಿಸುವ ಕುರಿತು.

ಶ್ರಿ ಡಿ.ವಿ. ಸದಾನಂದಗೌಡ: ನಾನು ಶೂನ್ಯ ವೇಳೆಯಲ್ಲಿ ಬೇಸಿಗೆ ತಿಂಗಳಲ್ಲಿ ರೈತರಿಗೆ ತೊಂದರೆಯಾಗುವ ಬಗ್ಗೆ ಕೇಳಿದ್ದೆ. ಈಗ ಭಾರೀ ನೀರಾವರಿ ಸಚಿವರು ಬಂದಿರುವುದರಿಂದ, ಅವರಿಂದ ಉತ್ತರ ಕೊಡಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು): ದಿ: 17. 1. 97ರಂದು ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಇದರಲ್ಲಿ ನೀರೆತ್ತಲು ಪರವಾನಗಿ ನೀಡುವಾಗ ಬೇಸಿಗೆ ತಿಂಗಳುಗಳಾದ ಫೆಬ್ರವರಿ, ಜೂನ್ ತಿಂಗಳನ್ನು ಹೊರತುಪಡಿಸಿ, ಬೇರೆ ತಿಂಗಳಲ್ಲಿ ನೀರೆತ್ತಲು ಅವಕಾಶ ಕೊಡಬಹುದೆಂದು ನೀರಾವರಿ ಇಲಾಖೆಯು ಅನುಮತಿ ಕೊಟ್ಟಿದೆ. ತಾವು, ಬೇಸಿಗೆ ತಿಂಗಳಲ್ಲಿ ಪ್ರಾಮುಖ್ಯತೆ ಕೊಡಿ ಎಂದು ಹೇಳುತ್ತಿದ್ದೀರಿ. ಆದರೆ, ನೀರು ನೈಸರ್ಗಿಕ ಸಂಪತ್ತು. ಬೇಸಿಗೆಯಲ್ಲಿ ಮಳೆ ಕಡಿಮೆ ಬೀಳುವುದರಿಂದ, ಜಾನುವಾರುಗಳಿಗೆ, ಕುಡಿಯುವ ನೀರಿಗೆ ತೊಂದರೆಯಾಗಬಾರದೆನ್ನುವ ದೃಷ್ಟಿಯಿಂದ, ಈ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅದನ್ನು ಬಿಟ್ಟು, ಇನ್ನೂ ಹೆಚ್ಚು ನೀರು ಲಭ್ಯವಾದರೆ, ಆ ಸ್ಥಳಗಳಲ್ಲಿ ಕೊಡಬಹುದೆಂದು ಸುತ್ತೋಲೆಯನ್ನು ತಿದ್ದುಪಡಿ ಮಾಡಿ ಕಳುಹಿಸಿಕೊಡುತ್ತೇನೆ.

(ಖ)ಮುಜರಾಯಿ ಇಲಾಖೆಯಲ್ಲಿ ಕ್ಲಾಸ್(2) ಅಧಿಕಾರಿ ಶ್ರೀವಿ.ಆರ್.ರಂಗಸ್ವಾಮಯ್ಯನವರು,ಬೆಂಗಳೂರು ಬನಶಂಕರಿ ದೇವಾಲಯದ ಜಮೀನನ್ನು ಅನಧಿಕೃತವಾಗಿ ಮಾರಾಟ ಮಾಡಲು ಸಹಕರಿಸಿದರೆಂಬ ವಿಚಾರದಲ್ಲಿ ಅಮಾನತ್ತು ಮಾಡಿರುವುದು.

+ಶ್ರೀ ಯು.ಆರ್. ಸಭಾಪತಿ(ಉಡುಪಿ): ಮುಜರಾಯಿ ಇಲಾಖೆಗೆ ಸಂಬಂಧಪಟ್ಟಂತೆ, ಮಂತ್ರಿಗಳು, ಅಧಿಕಾರಿಗಳು ಶಾಮೀಲಾಗಿರುವ ಭ್ರಷ್ಟಾಚಾರ ಪ್ರಕರಣವನ್ನು ನಾನು ಸದನದ ಮುಂದಿಡಲು ಬಯಸುತ್ತಿದ್ದೇನೆ. ಶ್ರೀ ವಿ.ಆರ್. ರಂಗಸ್ವಾಮಯ್ಯ, ಮುಜುರಾಯಿ ಇಲಾಖೆಯಲ್ಲಿ ಕ್ಲಾಸ್-2 ಅಧಿಕಾರಿ. ಅವರನ್ನು ಬೆಂಗಳೂರಿನ ಬನಶಂಕರಿ ದೇವಾಲಯದ ಜಮೀನನ್ನು ಅನಧಿಕೃತವಾಗಿ ಮಾರಾಟ ಮಾಡಲು ಸಹಕರಿಸಿದರೆಂಬ ಬಗ್ಗೆ ದಿ:20. 5. 95ರಂದು ಅಮಾನತ್ತುಗೊಳಿಸಿದ್ದಾರೆ. ದಿ:27. 8. 95ರಂದು ಈ

ಹಗರಣವನ್ನು ಸಿ.ಓಡಿಗೆ ಒಪ್ಪಿಸಿದ್ದಾರೆ. ಈ ಮಧ್ಯೆ ದಿ:27.4.98ರಂದು ಈಗಿನ ಮಂತ್ರಿಗಳು ಬಂದ ಮೇಲೆ, ಈ ಅಧಿಕಾರಿಯ ವಿಚಾರಣೆ ಬಗ್ಗೆ ಬಾಕಿ ಇರುವಾಗಲೇ, ಅವರ ಅಮಾನತ್ತು ಆಜ್ಞೆಯನ್ನು ವಾಪಸ್ಸು ಪಡೆದಿದ್ದರು, ಅವರು ಕ್ಲಾಸ್-2 ಅಧಿಕಾರಿಯಾಗಿದ್ದು, ಅವರನ್ನು ಕ್ಲಾಸ್-1 ಅಧಿಕಾರಿಯನ್ನಾಗಿ ರೂಲ್ 32ರ ಪ್ರಕಾರ ಬಡ್ತಿ ನೀಡಿ, ಅವರನು ತಿರುಪತಿಯ ಟಿಟಿಡಿಗೆ ಸ್ಪೆಷಲ್ ಆಫೀಸರ್ ಆಗಿ ಕಳುಹಿಸಿ ಕೊಟ್ಟಿದ್ದಾರೆ. ದಿ: 30.6.98ರಂದು ಇಲಾಖಾ ವಿಚಾರಣೆಯನ್ನು ವಾಪಸ್ ತೆಗೆದುಕೊಂಡರು. ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಬೇಕಾದಷ್ಟು ಅವ್ಯವಹಾರಗಳನ್ನು ನಡೆಸಲು ಪ್ರಯತ್ನ ನಡೆಸಿದ್ದಾರೆ. ಅದರ ಬಗ್ಗೆ ದಾಖಲೆಗಳನ್ನು ಆಗಲೇ ನಾನು ತಮ್ಮ ಮೂಲಕ ಸಚಿವರಿಗೆ ಕಳುಹಿಸಿದ್ದೇನೆ. ಅವರ ಶಿಫಾರಸ್ಸಿನ ಅನ್ವಯ ದಿ: 19. 12.98 ರಂದು ಒಬ್ಬರು ಸಂಜಾತಂ ಮುನಿವೇಲು ಎನ್ನುವವರನ್ನು ಪರ್ಮನೆಂಟಾಗಿ ನೇಮಿಸಿದ್ದಾರೆ. ಈ ನೇಮಕಾತಿ ಸಂಪೂರ್ಣವಾಗಿ ವ್ಯಂದ ಮತ್ತು ನೇಮಕಾತಿ ಕಾಯ್ದೆಯ ಉಲ್ಲಂಘನೆಯಾಗಿದೆ. ಉಲ್ಲಂಘನೆ ಮಾಡಿದ್ದಾರೆಂದು ಹೇಳುವುದರ ಬಗ್ಗೆ ಅಲ್ಲಿಯ ಪತ್ರಿಕೆಗಳಾದ ಆಂಧ್ರಜ್ಯೋತಿ, ಈ ನಾಡುಗಳಲ್ಲಿ ಪ್ರಕಟಣೆ ಬಂದಿದೆ. ನಂತರ, ದಿ: 12. 10.98ರಂದು 5 ಜನರನ್ನು ನೇಮಕಾತಿ ಮಾಡಿದರು ಇದು ಬಹಳ ಆಶ್ಚರ್ಯಕರ ರೀತಿಯ ನೇಮಕಾತಿಯಾಗಿದೆ. ಅವರಲ್ಲಿ ಶ್ರೀ ಪವನ್‌ಕುಮಾರ್ ರೆಡ್ಡಿ ಜಿನ್ ಶ್ರೀನಿವಾಸ ರೆಡ್ಡಿ,' 153 ವೆಸ್ಟ್‌ಕಾರ್ಡ್ ರಸ್ತೆ, ತಿರುಮಲ, ಶ್ರೀ ವೇಣುಗೋಪಾಲರೆಡ್ಡಿ, ಬಿನ್ ಶ್ರೀನಿವಾಸುಲು ರೆಡ್ಡಿ, ಮಹದೇವಪುರಂ, ಕೃಷ್ಣರಾಜಪುರ ಅಂಚೆ ಬೆಂಗಳೂರು, ಶ್ರೀ ಮುರಳಿ ಕೃಷ್ಣ ಬಿನ್ ವಿ. ಮುನಿಸ್ವಾಮಿ, 450, 11ನೇ ಕ್ರಾಸ್, 5ನೇ ಮೇನ್, ಸದಾಶಿವ ನಗರ, ಬೆಂಗಳೂರು , ಶ್ರೀ ಸುಧಾಕರ ಬಿನ್ ವಿ.ರಾಯಯ್ಯ, ಪಾರಂಬಹಳ್ಳಿ, ರಾಜಿನ್‌ಸನ್‌ಪೇಟೆ, ಕೆ.ಜಿ.ಎಫ್.ಕೋಲಾರ, ಶ್ರಿ ಎಲ್; ಮುನೇಶ್ವರಯ್ಯ ಬಿನ್ ಕುಷ್ಣಸ್ವಾಮಿ, 32, ಗಾಂಧೀ ರೋಡ್, ತಿರುಪತಿ, ಈ 5 ವಿಳಾಸಗಳೆನ್ನೇನು ಕೊಟ್ಟಿದ್ದಾರೆ . ಅವು ಸಂಪೂರ್ಣವಾಗಿ ಬೋಗಸ್ ವಿಳಾಸ. ಈ ವ್ಯಕ್ತಿಗಳು ಈ ವಿಳಾಸದಲ್ಲಿಲ್ಲ. ಅವರು ಅಲ್ಲಿರುವ ಯಾರನ್ನೋ ಹಣದ ವ್ಯವಹಾರ ನಡೆಸಿಕೊಂಡು ಇವರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ. ರಂಗಸ್ವಾಮಯ್ಯ ಇಲ್ಲಿ ಮಾಡಿದ ಅನ್ಯಾಯಕ್ಕೆ ಇವರು ಪ್ರತಿಫಲ ಕೊಟ್ಟು, ಅಲ್ಲಿ ಕಳುಹಿಸಿದ ಮೇಲೆ, ಇವರು ತಿರುಪತಿಗೆ ಹೋಗಿ ತಮ್ಮ ಪಾಪದ ಕೆಲಸವನ್ನು ಮಾಡಿದ್ದಾರೆ. ಆಮೇಲೆ, ದಿ: 31. 10.98ರಂದು ಶ್ರೀ ವಿನಾಯಕ ಎಂ.ಕೆ.ಆರ್, ಐ ಎಎಸ್, ಎಗ್ಜಿಕ್ಯುಟೀವ್ ಆಫೀಸರ್ ರವರು ಸ್ಪೆಷಲ್ ಆಫೀಸರ್ ಬಗ್ಗೆ ಒಂದು ಪತ್ರ ಬರೆದು ಅದರಲ್ಲಿ ಏನು ಹೇಳಿದ್ದಾರೆಂದು ಶ್ರೀ ನಾರಾಯಣ, ಎಂಎಲ್‌ಎ, ಬಳ್ಳಾರಿ, ಶ್ರೀ ಬಿ.ವಿ. ಎನ್. ಭಟ್ಟಾಚಾರ್ಯ ಕಮೀಷನರ್ ಫಾರ್ ಮುನಿಸಿಪಾಲಿಟಿ, ಬೆಂಗಳೂರು, ಶ್ರೀ ಬಿ.ಆರ್. ಕೃಷ್ಣ, ಪಿಎಸ್‌ಟು ಹಾನರ್‌ಬಲ್ ಮಿನಿಸ್ಟರ್ ಫಾರ್ ಸೋಷಿಯಲ್ ವೆಲೆಫೇರ್, ಶ್ರೀ ಅಶ್ವತ್ಥನಾರಾಯಾಣ, ಅಸಿಸ್ಟೆಂಟ್, ಐ.ಜಿ.ಇನ್ ಕರ್ನಾಟಕ, ಬೆಂಗಳೂರು ಶ್ರೀ ಬಿ.ಕೆ. ಬಾಲಕೃಷ್ಣ, ಎಂ ಎಲ್‌ಎ, ಛೇರ್ಮನ್, ಕೆಎಸ್‌ಆರ್‌ಟಿಸಿ, ಬೆಂಗಳೂರು, ಶ್ರೀ ಲೇಖಿರ್ ಕೇರ್ ಆಫ್ ಎಂಡೋಮೇಂಟ್ ಮಿನಿಸ್ಟರ್, ಕರ್ನಾಟಕ, ಶ್ರೀ ನಾಗರಾಜು, ಅಡ್ವೋಕೇಟ್, ಕೋಲಾರ, ಶ್ರೀ ದ್ವಾರಕಾನಾಥ್, ಕಮೀಷನರ್, ಇಂಡೋಮೇಂಟ್ ಇವರ ಹೆಸರಿನಲ್ಲಿ ಸೇವಾ ಚೀಟುಗಳನ್ನು ಸ್ಪೆಷಲ್ ಆಫೀಸರ್‌ರವರು ಪರ್ಚೇಸ್ ಮಾಡಿದ್ದಾರೆ. ಆದರೆ, ಈ ಎಲ್ಲಾ ವ್ಯಕ್ತಿಗಳು ಆ ಸೇವಾ ಚೀಟಿಗಳನ್ನು ಪಡೆದುಕೊಂಡಿಲ್ಲ. ಅವರು ಹೆಸರಿನಲ್ಲಿ ಇವರು ಪಡೆದುಕೊಂಡು, ಅದನ್ನು ಬೇರೆ ರಾಜ್ಯಗಳ ಭಕ್ತಾಧಿಗಳು ಬಂದಾಗ, ಹಣಕ್ಕೆ ಮಾರಾಟ ಮಾಡಿದ ಬಗ್ಗೆ ಐಎಎಸ್ ಅಧಿಕಾರಿಗಳು ದಿ: 31. 10.98ರಂದು ಶ್ರೀಸೀತಾರಾಂ, ಐಎಎಸ್, ರಿಲೀಜಿಯಸ್ ಮತ್ತು ಚಾರಿಟಬಲ್ ಇವರುಗೆ ಪತ್ರ,

ಬರೆದಿದ್ದಾರೆ. ಇಷ್ಟೆಲ್ಲಾ ಅವ್ಯವಹಾರಗಳನ್ನಿಟ್ಟುಕೊಂಡು, ಅವರ ಮೇಲೆ ಯಾವುದೇ ತನಿಖೆ ಜರುಗಿಸಲಿಲ್ಲ. ಇದಾದ ಮೇಲೆ, ಈಗ ಹೊಸದಾಗಿ ಇನ್ನೊಂದು ಶುರುವಾಗಿದೆ. ಅಲ್ಲಿ ಏಳೂವರೆ ಎಕರೆ ಜಮೀನನ್ನು ಟಿಟಿಡಿಯವರು ನಮಗೆ ಲೀಸ್‌ಗೆ ಕೊಡುತ್ತಾರೆ. ವರ್ಷಕ್ಕೆ 1, 111 ರೂಪಾಯಿಗಳು ಲೀಸ್ ರೂಂಗಳ ಕಟ್ಟಡ ಕಟ್ಟುವ ಬಗ್ಗೆ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ, ಈ ಹಿಂದಿನ ನಮ್ಮ ಮುಜರಾಯಿ ಸಚಿವರು ಮತ್ತು ಸರ್ಕಾರದ ಅಧಿಕಾರಿಗಳೆಲ್ಲರೂ, ಆ ಜಾಗ ಏನಿದೆ, ಅದು ಹಿಂದೆ ಆಂಧ್ರ ಸರ್ಕಾರದಿಂದ ನಮ್ಮ ಮೈಸೂರಿನ ಮಹಾರಾಜರಿಗೆ ಉಂಬಳಿಯಾಗಿ ಕೊಟ್ಟ ಭೂಮಿಯೆಂದು ಹೇಳುವುದಕ್ಕೆ ದಾಖಲೆ ಪತ್ರಗಳು ಇವತ್ತಿಗೂ ಸಹ ಮೈಸೂರು ಮಹಾರಾಜರ ಇಲಾಖೆಯಲ್ಲಿವೆ. ಅದು ನಮ್ಮದೇ ಜಾಗ. ಅದನ್ನು ಪುನಃ ಟಿಟಿಡಿಯಿಂದ ಪಡೆದುಕೊಳ್ಳುವ ಹುನ್ನಾರವೇಕೆ ನಡೆದಿದೆ? ಮಂತ್ರಿಗಳು ಇನ್ನೂ ವಿಚಿತ್ರವಾದ ಗುಣವನ್ನು ಹೊಂದಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಇವರ ಇಲಾಖೆಯಲ್ಲಿ ಕ್ಲಾಸ್-1 ಅಧಿಕಾರಿಗಳು ಬೇಕಾದಷ್ಟು ಜನರಿದ್ದಾರೆ. ಆ ರೀತಿ ಇದ್ದರೂ ಸಹ, ಕ್ಲಾಸ್-2 ಅಧಿಕಾರಿಗಳಿಗೆ ರೂಲ್-32ನಲ್ಲಿ ಪ್ರಮೋಷನ್ ಕೊಡುವುದು, ಅವರಿಗೆ ಸ್ವತಂತ್ರ ಅಧಿಕಾರಿ ಕೊಡುತ್ತಾರೆ. ಎಲ್ಲೆಲ್ಲಿ ಕೊಟ್ಟಿದ್ದಾರೆಂದರೆ, ಸ್ಪೆಷಲ್ ಆಫೀಸರ್, ತಿರುಮಲ ರಂಗಸ್ವಾಮಯ್ಯ, ಮಲೆಮಹದೇಶ್ವರ ದೇವಸ್ಥಾನದಲ್ಲಿ ವೆಂಕಟೇಶಮೂರ್ತಿಯವರಿಗೆ, ಹೆಚ್‌ಕ್ಯೂಎ2 ಎಂಡೋಮೆಂಟ್ ಕಮೀಷನರ್, ಪುಟ್ಟಸ್ವಾಮಿ ಕ್ಲಾಸ್-2 ಅವರಿಗೆ, ವಿಜಯಚಂದ್ರ ಸುಬ್ರಹ್ಮಣ್ಯ ಮತ್ತು ಕದ್ರಿ ಮಂಜುನಾಥೇಶ್ವರ ಇವರುಗೆ, ವಿಜಯಲಕ್ಷ್ಮಿ, ಅಸಿಸ್ಟೆಂಟ್ ಕಮೀಶನರ್ ನಗರಸಭೆ ವಲಯ ಇವರಿಗೆ ಕೊಟ್ಟಿದ್ದಾರೆ. ಇದೊಂದು ಹಗರಣವಾಗಿರುವುದರಿಂದ ಇದನ್ನು ಪ್ರಸ್ತಾಪಿಸಲೇ ಬೇಕಾಗಿದೆ. ಅರ್ಧ ಗಂಟೆಗೆ ಚರ್ಚೆಗೆ ಅವಕಾಶ ಕೊಡಿ ಎಂದು ನಾನು ಅಧ್ಯಕ್ಷರನ್ನು ಕೇಳಿದಾಗ, ಶೂನ ವೇಳೆಯಲ್ಲಿ ಪ್ರಸ್ತಾಪಿಸಿ ಎಂದು ಹೇಳಿದ್ದರು. ನನಗೆ ನ್ಯಾಯ ಸಿಗಬೇಕು. ಎಷ್ಟೋ ವಿಚಾರಗಳನ್ನು ನಾನು ರಾಜ್ಯಪಾಲರ ವಂದನಾ ನಿರ್ಣಯ ಚರ್ಚೆಯಲ್ಲಿ ಹೇಳಿದ್ದರೂ ಸಹ, ಎಂಡೋಮೆಂಟ್ ಮಂತ್ರಿಗಳಿಂದ ಉತ್ತರ ಬರುತ್ತಿಲ್ಲ. ನನಗೆ ಸಮಗ್ರ ತನಿಖೆಯಾಗಬೇಕು. ನಾನು ತಮ್ಮ ಮೂಲಕ ಕೇಳುವುದೇನೆಂದರೆ, ಕ್ಲಾಸ್-1 ಅಧಿಕಾರಿಗಳನ್ನಾಗಿ ಕ್ಲಾಸ್-2 ಅಧಿಕಾರಿಗಳನ್ನು ಈ ರೀತಿ ಇದ್ದಾಗಲೂ ಏಕೆ ಬಡ್ತಿ ಮಾಡುತ್ತಿದ್ದೀರಾ? ಎಲ್ಲಾ ರೀತಿಯಲ್ಲೂ ಭ್ರಷ್ಟಾಚಾರ ತುಂಬಿ ಹೋಗಿದೆ. ಇದರ ಬಗ್ಗೆ ಸಮಗ್ರವಾದ ಹೇಳಿಕೆಯನ್ನು ಅವರು ಕೊಡಬೇಕು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು): ನಾನು ತಮ್ಮ ಮೂಲಕ ಮಾನ್ಯ ಸದಸ್ಯರಾದ ಶ್ರೀ ಸಭಾಪತಿಯವರಿಗೆ ಉತ್ತರ ರೂಪದಲ್ಲಿ ಅಕ್ಷರಕ್ಷರಕ್ಕೂ ಉತ್ತರ ಹೇಳಬಯಸುತ್ತೇನೆ. ರಂಗಸ್ವಾಮಯ್ಯನವರು ಬನಶಂಕರಿ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮಾಡುವ ಕಾಲಕ್ಕೆ, ಅಲ್ಲಿರುವ ಜಮೀನಿನ ಹಗರಣದ ವಿಷಯ ಬಂದಾಗ, ನಾವು ಅವರನ್ನು ವಿಚಾರಣೆ ಮಾಡಿ, ಅಮಾನತ್ತಿನಲ್ಲಿಟ್ಟಿವು. ನಂತರ, ಅವರನ್ನು ಒಮ್ಮಿಂದೊಮ್ಮೆಲೇ ರೀ-ಇನ್‌ಸ್ಟೇಟ್ ಮಾಡಲಿಲ್ಲ. ಇಲಾಖೆಯಿಂದ ವಿಚಾರಣೆಯಾಗಬೇಕೆಂದಿದ್ದರೂ ಸಹ, ಈ ಇಲಾಖೆ ವಿಚಾರಣೆಗೆ ಒಳಪಡುವುದಿಲ್ಲವೆನ್ನುವ ದೃಷ್ಟಿಯಿಂದ ಹಿಂದಿನ ಸಚಿವರಾಗಿದ್ದ ಶ್ರೀ ಜಾಲಪ್ಪನವರು ಇದನ್ನು ಸಿ.ಓ.ಡಿಗೆ ಒಪ್ಪಿಸಿದರು. ಇದರಿಂದಾಗಿ, ಮತ್ತೆ ವಿಚಾರಣೆಯನ್ನು ಮುಂದುವರೆಸಿಕೊಂಡು ಎಂದಿದ್ದರಿಂದ, ಇಲಾಖಾ ವಿಚಾರಣೆ ಮಾಡದೆ, ಸಿಓಡಿಗೆ ಒಪ್ಪಿಸಿದೆವು. ಸಿ.ಓ.ಡಿ. ವಿಚಾರಣೆಯಲ್ಲಿರುವ ಅಮಾನತ್ತಿನಲ್ಲಿರುವ ಅಧಿಕಾರಿಯನ್ನು ತೆಗೆದುಕೊಳ್ಳಬಾರದೆಂದು ಇದೆ. ಹೀಗಿದ್ದರೂ ರೂಲ್ 32ರ ಪ್ರಕಾರ ಪುನಃ ಅವನನ್ನು ಸೇವೆಗೆ ತೆಗೆದುಕೊಳ್ಳಬೇಕು ಎಂದಿರುವಾಗ, ನಾವು ಆರು ತಿಂಗಳಲ್ಲಿ ಮೂರು ವರ್ಷಗಳಾದರೂ ನಾವು ಅವನನ್ನು ಪುನಃ ಇಲಾಖೆಗೆ ತೆಗೆದುಕೊಳ್ಳಲಿಲ್ಲ. ಹಾಗೆ ಅಮಾನತ್ತಿನಲ್ಲಿಟ್ಟಿವು.

4.20 ಪಿ.ಎಂ.

ಮೂರು ವರ್ಷಗಳು ಕಳೆದರೂ ಸಹಿತ ಸಿ.ಓ.ಡಿ.ಯಿಂದ ವಿಚಾರಣೆ ಮುಗಿಸಿಲ್ಲ. 32ರ ನಿಯಮದ ಪ್ರಕಾರ ಅವರು ಪುನಃ ಮನವಿ ಮಾಡಿಕೊಂಡಾಗ ಒಮ್ಮೆಗೆ ನಾವು ಅವರನ್ನು ತಿರುಪತಿಗೆ ವರ್ಗಾವಣೆ ಮಾಡಲಿಲ್ಲ ಎನ್ನತಕ್ಕಂಥ ಅಂಶವನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಅವರನ್ನು ಮೊದಲು ಶಿವಮೊಗ್ಗ ಜಿಲ್ಲಾ ಕಛೇರಿಗಳಲ್ಲಿ ನಿಯುಕ್ತಿ ಮಾಡಿದ್ದೆವು, ನಂತರ ಸಾಮಾನ್ಯ ವರ್ಗಾವಣೆ ಸಂದರ್ಭದಲ್ಲಿ ಅಯಿತು ಎನ್ನತಕ್ಕಂಥ ಮಾತನ್ನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ, ನಮ್ಮ ಇಲಾಖೆ ಎಂಥದ್ದು ಎಂದು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ, ನಮ್ಮ ಇಲಾಖೆ ಎಂಥದ್ದು ಎಂದು ಮಾನ್ಯ ಸದಸ್ಯರು ಮೊದಲು ತಿಳಿದುಕೊಳ್ಳಬೇಕು, ಏಕೆಂದರೆ, ನಮ್ಮ ಇಲಾಖೆಯಲ್ಲಿ ಕ್ಲಾಸ್ ಓನ್ ಆಫೀಸರ್ಸ್ ಸುಮಾರು 8-10 ಜನ ಇದ್ದಾರೆ. ಇವರನ್ನು ನಾವು ತಿರುಗಾಮುರುಗ ವರ್ಗಾವಣೆ ಮಾಡಬೇಕಾದರೆ ಕುಕ್ಕೆ ಸುಬ್ರಹ್ಮಣ್ಯ ಅಥವಾ ಬನಶಂಕರಿ ದೇವಸ್ಥಾನಕ್ಕೆ ಹಾಕಬೇಕು ಇಲ್ಲದಿದ್ದರೆ ಮಲೇಮಹಾದೇಶ್ವರ ದೇವಸ್ಥಾನಕ್ಕೆ ಹಾಕಬೇಕು.

ಶ್ರೀ ವಾಟಾಳ್ ನಾಗರಾಜ್ : ಇವರ ಇಲಾಖೆಯಲ್ಲಿರುವುದು ಕರ್ಪೂರ, ಗಂಧದಕಡ್ಡಿ. ಊದುಬತ್ತಿ, ಮೊನ್ನೆ ಅರ್ಚಕರೇ ಅವರ ವಿರುದ್ಧ ತಿರುಗಿ ಬಿದ್ದಿದ್ದಾರೆ, ಇವರಿಗೆ ರಕ್ಷಣೆ ಕೊಡ ಬೇಕಾಗುತ್ತದೆ. ಅಂಥ ಪರಿಸ್ಥಿತಿ ಮಾನ್ಯ ಮಂತ್ರಿಗಳಿಗೆ ನಿರ್ಮಾಣವಾಗಿದೆ. ಏಕೆಂದರೆ, ಈ ವಿಷಯ ಪತ್ರಿಕೆಯಲ್ಲಿ ಬಂದಿದೆ, ತಮಗೆ ಪೋಲೀಸ್ ರಕ್ಷಣೆ ನೀಡುವುದು ಒಳ್ಳೆಯದು. ಏಕೆಂದರೆ, ದೇವಸ್ಥಾನಗಳಿಗೆಲ್ಲಾ ಬೇಗ ಹಾಕಿ ಅರ್ಚಕರೆಲ್ಲರೂ ಅವರ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ವಿಚಾರಣೆಯಲ್ಲಿರುವ ಅಮಾನತ್ತಿನಲ್ಲಿರುವ ಅಧಿಕಾರಿಗೆ ಬಡ್ತಿ ಕೊಡಬೇಕು? ಬೇಕಾದರೆ ಪುನಃ ನೇಮಕಾತಿ ಮಾಡಿಕೊಳ್ಳಲಿ, ಬಡ್ತಿ ಕೊಡ ಬೇಕಾದರೆ ನೀವು ಏನಾದರೂ ಇದರಲ್ಲಿ ಭ್ರಷ್ಟಾಚಾರ ವ್ಯವಹಾರ ನಡೆಸಿದ್ದೀರಿ ಎಂದು ನಾನು ನೇರವಾಗಿ ಆರೋಪ ಮಾಡಬೇಕಾಗುತ್ತದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಅವರಿಗೆ ಬೇಕಾದರೆ ಇನ್ನೂ ಕೂಲಂಕಷವಾಗಿ ಉತ್ತರ ಹೇಳುತ್ತೇನೆ, ತಾವು ಸ್ವಲ್ಪ ಕೇಳಿ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲು ದೇವಸ್ಥಾನಗಳಿಗೆ ಹಾಕಿರುವ ಬೀಗವನ್ನು ಯಾವಾಗ ತೆಗೆಸುತ್ತೀರಿ ಮೊದಲು ಅದನ್ನು ಹೇಳಿ, ನಂತರ ಚರ್ಚೆ ಮಾಡಿ. ಇದು ಕೂಡ ಇದಕ್ಕೆ ಸಂಬಂಧಪಟ್ಟಿರುವುದು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಬೀಗ ಹಾಕತಕ್ಕಂಥದ್ದು ಅರ್ಚಕರು ಅವರಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬೀಗ ಹಾಕಿದ್ದಾರೆ. ಅದನ್ನು ಯಾವಾಗ ತೆಗೆಸುತ್ತೀರಿ ಮೊದಲು ಅದನ್ನು ಹೇಳಿ.

ಉಪಾಧ್ಯಕ್ಷರು : ರೆಡ್ಡಿಯವರೇ ಮೊದಲು ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಂತ್ರಿಗಳೇ ತಾವು ಉತ್ತರ ಮುಂದುವರಿಸಿ...

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ನಮ್ಮಲ್ಲಿರತಕ್ಕಂಥ ಅಧಿಕಾರಿ ವರ್ಗದವರನ್ನು ಅವರು ಕೆಲಸ ಮಾಡುತ್ತಾರೋ ಅಲ್ಲಿಯೇ ಅವರನ್ನು ಹಾಕಬೇಕೇ ಹೊರತು ಅವರನ್ನು ಆದಾಯ ಬರತಕ್ಕಂಥ ದೇವಸ್ಥಾನಗಳಿಗೆ ಹಾಕುವುದಕ್ಕೆ ಬರುವುದಿಲ್ಲ. ಆದ್ದರಿಂದ ಸಾಮಾನ್ಯ ವರ್ಗಾವಣೆ ಸಂದರ್ಭದಲ್ಲಿ ನಮ್ಮಲ್ಲಿರುವ ಅಧಿಕಾರಿಗಳನ್ನು ಅಡ್ಜೆಸ್ಟ್‌ಮಾಡಬೇಕೇ ವಿನಾಃ ಬೇರೆ ಕಡೆಯಿಂದ ತರುವುದಕ್ಕೆ ಆಗುವುದಿಲ್ಲ. ತಿರುಪತಿಯಲ್ಲಿ ಆದಾಯಕ್ಕೋಸ್ಕರ ಕಟ್ಟಿರುವ ಕಟ್ಟಡ ನಮ್ಮ ಕಟ್ಟಡ ಅಲ್ಲ. ಭಕ್ತರ ಅನುಕೂಲಕ್ಕಾಗಿ ದಾನಿಗಳು ಕೊಟ್ಟಿರತಕ್ಕಂಥ ಅನುದಾನದಲ್ಲಿ ಅಲ್ಲಿ ಭವನಗಳನ್ನು ನಿರ್ಮಾಣ ಮಾಡಿದ್ದೇವೆ. ಇವುಗಳನ್ನು ನಾವು ಲಾಭದ ಉದ್ದೇಶದಿಂದ ಮಾಡತಕ್ಕಂಥವಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಆದಾಯ ಪಟ್ಟಿಯನ್ನು ಕೂಡ ಸಲ್ಲಿಸಿದ್ದೇನೆ. ಇಲ್ಲಿ ನಾವು ಕೇವಲ ಜನರ ಸೇವೆ ಮಾಡುವುದಕ್ಕೆ ಹೊರತು ಲಾಭದ ದೃಷ್ಟಿಯಿಂದಲ್ಲ. ಮೊದಲು ಒಂದು ರೂಮಿಗೆ 75 ರೂಪಾಯಿ ಕೊಡತಕ್ಕಂಥದ್ದು ಇತ್ತು, ನಾನು ಬಂದ ಮೇಲೆ ಒಂದು ರೂಮಿಗೆ 175 ರೂಪಾಯಿ ಕಯಡತಕ್ಕ ವ್ಯವಸ್ಥೆ ಮಾಡಿದ್ದೇನೆ. ಏಕೆಂದರೆ, ಇವತ್ತು ತಾಲ್ಲೂಕು ಪ್ಲೇಸ್‌ನಲ್ಲಿ 175 ರೂಪಾಯಿಗೆ ಒಂದು ರೂಮು ಕೊಡ ಸಿಕ್ಕುವುದಿಲ್ಲ.....

ಉಪಾಧ್ಯಕ್ಷರು: ಅವರೇನು ಕೇಳುತ್ತಾರೆ ಅಷ್ಟಕ್ಕೆ ಮಾತ್ರ ಉತ್ತರ ಹೇಳಿ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ಆದಾಯವುಳ್ಳಂತಹ ದೇವಾಸ್ಥಾನಕ್ಕೆ ಹಾಕಿದ್ದೀರಿ ಎಂದು ಅವರು ಹೇಳಿರುವುದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ .

ಶ್ರೀ ಯು.ಆರ್. ಸಭಾಪತಿ : ನಾನು ಅಧಿಕಾರಿಯ ಬಗ್ಗೆ ಮಾತನಾಡಿದರೆ ಇವರು ಆದಾಯದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅತಿ ಬಡತನದಲ್ಲಿ ಇರುವ ದೇವರು ಯಾವುದು? ಅತಿ ಶ್ರೀಮಂತದಲ್ಲಿ ಇರುವ ದೇವರು ಯಾವುದು? ಮಾನ್ಯ ಮಂತ್ರಿಗಳು ಇದನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಒಟ್ಟು 43 ಸಾವಿರ ಬರುತ್ತವೆ ಅದರಲ್ಲಿ ಬಡತನ ಶ್ರೀಮಂತ ಎಂದು ಹೇಳಿದೆ.

ಶ್ರೀ ವಾಟಾಳ್‌ನಾಗರಾಜ್: ಆ ಎಲ್ಲಾ ದೇವರುಗಳ ಹೆಸರುಗಳನ್ನು ಈ ಸಭೆಯ ಮುಂದೆ ಮಂಡಿಸಬೇಕು, ಇದರಲ್ಲಿ ಯಾವ ದೇವರಿಗೆ ಎಷ್ಟೆಷ್ಟು ಆದಾಯ ಇದೆ ಎನ್ನುವುದನ್ನೂ ಹೇಳಬೇಕು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ತಿರುಪತಿಯಲ್ಲಿರುವ ದೇವಸ್ಥಾನ ಕರ್ನಾಟಕದ್ದು ಎಂದು ನನಗೆ ಗೊತ್ತು ತಿರುಪತಿ ದೇವಸ್ಥಾನದಲ್ಲಿರತಕ್ಕಂಥ ಸ್ಥಳ...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಿರುಪತಿ ವೆಂಕಟೇಶ್ವರ ಕರ್ನಾಟಕದ ದೇವರು ಎಂದು ಹೇಳುತ್ತಿದ್ದಾರೆ,ಇದು ಹೇಗೆ?....

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ : ಹಿಂದಿನ ಮುಜರಾಯಿ ಮಂತ್ರಿಗಳಾಗಿದ್ದಂಥ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಅಲ್ಲಿ ರೂಮುಗಳನ್ನು ಕಟ್ಟುವ ಸಲುವಾಗಿ ಅಡಿಗಲ್ಲು ಹಾಕಿದ್ದರು, ದಾನಿಗಳಿಂದಲೂ ದುಡ್ಡು ಶೇಖರಣೆ ಆಯಿತು, ಆದರೆ ಪರ್ಮಿಷನ್ ಕೊಡಲಿಲ್ಲ. ಮಾನ್ಯ ಸದಸ್ಯರುಗಳಿಗೆ ನಾನು ಏನು ಹೇಳುತ್ತೇನೆಂದರೆ, ಯಾವುದೇ ಕೆಲಸ ಮಾಡಬೇಕಾದರೂ ಕಾಗದ ಪತ್ರಗಳು ಕ್ಲಿಯರ್ ಆಗಿರಬೇಕು. ಈ ರೀತಿ ಇದ್ದಾಗ ಮಾತ್ರ ನಾವು ಕಟ್ಟಡಗಳನ್ನು ಕಟ್ಟಬಹುದು, ಇಲ್ಲದ್ದಿದರೆ ಕಟ್ಟುವುದಕ್ಕೆ ಆಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ನಾನು ಏನು ಹೇಳಿದೆ ಎಂದರೆ, ಅಲ್ಲಿಬೋಗಸ್ ಅಪಾಯಿಂಟ್ ಮೆಂಟ್ ಆಗಿದೆ, ಹಗರಣ, ನಡೆದಿದೆ ಅದರ ಬಗ್ಗೆ ಹೇಳಿ ಎಂದರೆ, ಹಿಂದಿನ ಪುರಾಣ ಹೇಳುತ್ತಿದ್ದಾರೆ. ಈ ಪುರಾಣವನ್ನು ಯಾರು ಕೇಳಿದ್ದಾರೆ? ನೀವು ಹಣ ತೆಗೆದುಕೊಂಡು ಅಪಾಯಿಂಟ್‌ಮೆಂಟ್ ಮಾಡಿದ್ದೀರಿ ಎಂದು ನಾನು ಹೇಳುತ್ತಿದ್ದರೆ, ತಾವು ಹಿಂದಿನ ಪುರಾಣ ಹೇಳುತ್ತಿದ್ದೀರಿ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ನಾನೇನು ಸುಳ್ಳು ಹೇಳುತ್ತಿಲ್ಲ. ಅಲ್ಲಿ ಅಡಿಗಲ್ಲು ಹಾಕಿರುವುದಕ್ಕೆ ಬುನಾದಿ ಹಾಕಿರುವ ಕಲ್ಲು ಇದೆ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಬುನಾದಿ ಹಾಕಿರುವ ಕಲ್ಲು ಅಲ್ಲಿ ಪ್ರತ್ಯೇಕವಾಗಿದೆ. ಇಲ್ಲಿ ಜಗಳದಿಂದ ಏನೂ ಲಾಭವಿಲ್ಲ, ದಾನ ಕೊಡತಕ್ಕಂಥ ಜನಗಳು ಇದ್ದಾರೆ, ಸರ್ಕಾರದಿಂದ ಹಾಗೂ ಇಲಾಖೆಯ ವತಿಯಿಂದಲೂ ದುಡ್ಡು ಖರ್ಚು ಆಗುವುದಿಲ್ಲ

ಶ್ರೀ ಯು.ಆರ್. ಸಭಾಪತಿ : ನಾನು ಇದನ್ನು ಪ್ರತಿಭಟನೆ ಮಾಡುತ್ತೇನೆ. ನಾನು ಕೇಳಿರುವ ಪ್ರಶ್ನೆಗೆ ವ್ಯತಿರಿಕ್ತವಾದ ಉತ್ತರ ಕೊಡುತ್ತಿದ್ದಾರೆ, ಇದು ಸದನಕ್ಕೆ ಗೌರವ ತರುವಂತಹ ಉತ್ತರವಲ್ಲ. ನಾನು ಕೇಳುವುದೇನು, ಇವರು ಹೇಳುವುದೇನು. ನಾನು ಕೇಳಿರುವುದಕ್ಕೆ ತಾವು ಉತ್ತರ ಕೊಡಬೇಕು

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರು ಬಹಳ ದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ, ಮಾನ್ಯ ಸಭಾಪತಿಯವರಿಗೆ ತಮ್ಮ ವಿಚಾರದ ಬಗ್ಗೆ ಇನ್ನೂ ವಿವರಣೆ ಬೇಕಿದ್ದರೆ ಮಾನ್ಯ ಮಂತ್ರಿಗಳ ಹತ್ತಿರ ಕುಳಿತು ಕೊಂಡು ಇದರ ಬಗ್ಗೆ ಹೇಳಿದರೆ ಅವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಯು.ಆರ್.ಸಭಾಪತಿ : ಒಬ್ಬ ಐಎಎಸ್ ಅಧಿಕಾರಿಯವರು ಆರೋಪ ಮಾಡಿ ಬರೆದಿರುವ ಪತ್ರಕ್ಕೆ ಕ್ರಮ ತೆಗೆದುಕೊಂಡಿದ್ದೀರಿ ? ಎಂದು ನಾನು ಕೇಳಿದರೆ ಇವರು ಪುರಾಣ ಹೇಳುತ್ತಾರೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಇಲ್ಲಿ ಏನಾಗಿದೆ ಎಂದರೆ ಹುಚ್ಚು ಮುಂಡೆ ಲಗ್ನದಲ್ಲಿ ಉಂಡವನೇ ಜಾಣ ಎನ್ನುವ ಹಾಗೆ ಆಗಿದೆ ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ತಿರುಪತಿ ದೇವರು ಕರ್ನಾಟಕದ್ದು ಎಂದು ಹೇಳಿದ್ದಾರೆ ಇದಕ್ಕೆ ನನ್ನ ಬೆಂಬಲವು ಇದೆ. ಇದಕ್ಕೆ ಸಂಪೂರ್ಣವಾದ ನನ್ನ ಬೆಂಬಲ ಇದೆ, ಇದರ ಬಗ್ಗೆ ತಾವೇನು ಅನುಮಾನ ಪಡಬೇಡಿ. ತಾವು ಸುದೀರ್ಘವಾಗಿ ಉತ್ತರ ಕೊಡಿ..

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ: ನನಗೆ ಸ್ವಲ್ಪ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕು. ಅವ್ಯವಹಾರ, ವ್ಯವಹಾರ, ಎಂದರೇನು ಎಂಬುದೇ ಮಾನ್ಯ ಸಭಾಪತಿಯವರಿಗೆ ಗೊತ್ತಿಲ್ಲ, ಇದರ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಇದು ಶೂನ್ಯ ವೇಳೆ ಎಂದು ಅವರು ನಮಗೆ ಹೇಳುತ್ತಾರೆ, ನಾನು ನೇರವಾಗಿ ಆರೋಪಿಸಿ ಇದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಅವರಿಗೆ ಕೊಟ್ಟಿದ್ದರೂ, ಪುನಃ ಅವ್ಯವಹಾರದ ಬಗ್ಗೆ ನನಗೆ ಉಪದೇಶ ಮಾಡುತ್ತಾರೆ ಇದಕ್ಕೇನು ಹೇಳಬೇಕು?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ : ಸನ್ಮಾನ್ಯ ಸದಸ್ಯರೇ, ನಾನು ಇದನ್ನು ಇರುವ ಹಾಗೆ ಕ್ಲಿಯರ್ ಆಗಿ ಹೇಳುವ ಮನುಷ್ಯ. ಮಾನ್ಯ ಸಭಾಪತಿಯವರಿಗೆ ವ್ಯವಹಾರ, ಅವ್ಯವಹಾರ, ಹೇಗೆ ಆಗುತ್ತದೆ ಎಂಬುದು ಗೊತ್ತಿಲ್ಲ, ನಾನು ಅದನ್ನು ಹೇಳುತ್ತೇನೆ, ಹಿಂದಿನ ಮಂತ್ರಿಗಳು ಸಂಚಾಲಕರು ಆಗಿರತಕ್ಕಂಥವರು ಬನಶಂಕರಿಯಲ್ಲಿರತಕ್ಕಂಥ ಕೋಟ್ಯಾನುಗಟ್ಟಲೆ ಬೆಲೆ ಬಾಳುವಂತಹ ಜಮೀನನ್ನು, 25 ಎಕರೆ ಜಮೀನನ್ನು ಪರಬಾರೆಗೆ ಹಾಕಿದರು, ಇಂಥ ಕೆಲಸ ನಾನು ಮಾಡಲಿಲ್ಲ.

ಉಪಾಧ್ಯಕ್ಷರು : ಸಭಾಪತಿಯವರೇ ನೀವು ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಎಲ್ಲಾ ವಿವರಗಳನ್ನು ಕೊಟ್ಟು ಮಾತಾನಾಡಿ...

ಶ್ರೀ ಯು.ಆರ್ ಸಭಾಪತಿ : ಈ ರೀತಿ ಉತ್ತರ ಕೊಡುವುದಕ್ಕೆ ತಾವು ಅನುಮತಿ ಕೊಡಬಾರದು, ನೇರವಾಗಿ ನನ್ನ ಪ್ರಶ್ನೆಗೆ ಉತ್ತರ ಕೊಡಿಸಬೇಕು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ರಂಗಸ್ವಾಮಿಯವರನ್ನು ಯಾವ ರೀತಿ ಮಾಡಿದ್ದೇವೆ ಎನ್ನುವುದಕ್ಕೆ ಇಲ್ಲಿ ಕಡತವಿದೆ. ಕಾರ್ಯದರ್ಶಿಯವರ ಮೂಲಕ ಈ ಕಡತ ಬಂದ ಮೇಲೆ ನಾನು ಆರ್ಡರ್ ಮಾಡಿರುವುದೇ ವಿನಾಃ ನಾನೇನು ಇದರ ಬಗ್ಗೆ ಮುತುವರ್ಜಿವಹಿಸಿ ಮಾಡಿಲ್ಲ.

ಶ್ರೀ ಮತಿ ಬಿ.ಟಿ. ಲಲಿತಾ ನಾಯಕ್ : ಇಷ್ಟೊಂದು ಅನ್ಯಾಯ. ಹಗರಣ, ಆಗಿರುವಾಗ ಒಂದು ವೇಳೆ ದೇವರು ಏನಾದರೂ ಇದ್ದರೆ, ಜಗಜ್ಯೋತಿ ಬಸವಣ್ಣನವರ ವಚನದಂತೆ, ''ನನ್ನನ್ನು ಕಿವುಡ ಹಾಗೂ ಕುರುಡನಾಗಿ ಮಾಡಯ್ಯ'' ಎಂದು ಹೇಳುತ್ತಿದ್ದೆ. ಇದು ನಮ್ಮಲ್ಲೂ ಕೂಡ ನಡೆಯುತ್ತಿದೆ. ಮಾನ್ಯ ಸಚಿವರು ಎಷ್ಟು ಅವ್ಯವಹಾರ ನಡೆಯುತ್ತಿದೆ ಎಂಬುದು ಮಾನ್ಯ ಸಭಾಪತಿಯವರಿಗೆ ಗೊತ್ತಿಲ್ಲ ಎಂದು ಹೇಳಿದರು, ಬಹುಶಃ ಮಾನ್ಯ ಮಂತ್ರಿಗಳಿಗೆ ಈ ಇಲಾಖೆಯಲ್ಲಿ ಎಷ್ಟೊಂದು ಅನ್ಯಾಯ ನಡೆಯುತ್ತಿದೆ ಎಂದು ಗೊತ್ತಿಲ್ಲ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ಅವರ ಮೇಲೆ ಆಪಾದನೆ ಬರುತ್ತದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಮಾನ್ಯ ಸದಸ್ಯರಾದ ಸಭಾಪತಿಯವರು ನನ್ನ ಹತ್ತಿರ ಬಂದು ನಾನು, ಎಲ್ಲಿ ತಪ್ಪು ಮಾಡಿದ್ದೇನೆ ಎಂಬುದನ್ನು ಸೂಚಿಸಿದರೆ ನಾನು ಒಂದು ನಿಮಿಷ ಕೂಡ ಮಂತ್ರಿ ಪದವಿಯಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಗ) ಬಾದಾಮಿಯಲ್ಲಿ ಪಟ್ಟದಕಲ್ಲು ರಥೋತ್ಸವ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಬಾದಾಮಿ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿಪಟ್ಟದಕಲ್ಲು ರಥೋತ್ಸವನ್ನು ಸುಮಾರು 9 ವರ್ಷಗಳಿಂದ ನೆರವೇರಿಸಿಕೊಂಡು ಬಂದಿದ್ದೇವೆ. ಈಗ ಇದ್ದಕಿದ್ದ ಹಾಗೆ ನಿಲ್ಲಿಸಿ ಬಿಟ್ಟಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಕಾರಣ ಏನೆಂದು ಅಧಿಕಾರಿಗಳನ್ನು ಕೇಳಿದರೆ ಅವರಿಂದ ಸರಿಯಾದ ಉತ್ತರ ಬರುತ್ತಿಲ್ಲ. ಇದನ್ನು ಮಾಡುವುದಕ್ಕಾಗುವುದಿಲ್ಲ ಎಂಬ ನಿರುತ್ತರ ಅವರಿಂದ ಬರುತ್ತಿದೆ. ಅಡೀ ರಾಷ್ಟ್ರದಾದ್ಯಂತದಿಂದ ಬರುವ ಕಲಾವಿದರಿಂದ ಬಹಳ ಅತ್ಯುತ್ತಮವಾಗಿ ಮತ್ತು ವಿಜೃಂಭಣೆಯಿಂದ ಸರ್ಕಾರದ ವತಿಯಿಂದ ನಡೆಯುವ ಈ ಕಾರ್ಯಕ್ರಮ ನಿಲ್ಲಬಾರದು. ಈ ವರ್ಷದಿಂದಲೇ ಈ ಕಾರ್ಯಕ್ರಮ ಮತ್ತೆ ಪ್ರಾರಂಭ ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬಾದಾಮಿಯ ಐಹೊಳೆಯಲ್ಲಿ ಪಟ್ಟದಕಲ್ಲು ಉತ್ಸವ ಪ್ರತಿ ವರ್ಷ ನಡೆಯುತ್ತಿತ್ತು. ಆದರೆ, ಈ ವರ್ಷ ನಿಲ್ಲಿಸಿರುವುದಕ್ಕೆ ಕಾರಣ ಏನು? ಮತ್ತೆ ಉತ್ಸವವನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.